# ಆಪರೇಷನ್ ಸದ್ಭಾವ: ವಿಯೆಟ್ನಾಂಗೆ 10 ಲಕ್ಷ ಡಾಲರ್ ಮೌಲ್ಯದ ತುರ್ತು ನೆರೆ ಪರಿಹಾರದ ನೆರವು ನೀಡಿದ ಭಾರತ

ಸೆಪ್ಟೆಂಬರ್ 15, 2024

ಯಾಗಿ ಚಂಡಮಾರುತದಿಂದ ಸಂಕಷ್ಟಕ್ಕೆ ಸಿಲುಕಿದ ದೇಶಗಳಿಗೆ ಮಾನವೀಯತೆ ನೆಲೆಗಟ್ಟಿನಲ್ಲಿ ನೆರವು ನೀಡಲು ಭಾರತ ಸರಕಾರ ಇಂದು ಸದ್ಭಾವ ಕಾರ್ಯಾಚರಣೆ ಆರಂಭಿಸಿದೆ.

2. ಉತ್ತರ ವಿಯೆಟ್ನಾಂನಲ್ಲಿ ಪ್ರಾಕೃತಿಕ ವಿಕೋಪದಿಂದ ಸಂಕಷ್ಟಕ್ಕೆ ಸಿಲುಕಿದ ಸಮುದಾಯಗಳಿಗೆ ಸದ್ಭಾವ ಕಾರ್ಯಾಚರಣೆ ಅಡಿಯಲ್ಲಿ ಭಾರತವು ವಿಯೆಟ್ನಾಂ ಸರ್ಕಾರಕ್ಕೆ ನೆರವು ನೀಡಿದೆ.

3.ನೀರು ಶುದ್ಧೀಕರಿಸುವ ಉಪಕರಣಗಳು, ನೀರಿನ ಬಾಟಲಿಗಳು, ಬ್ಲ್ಯಾಂಕೆಟ್ ಗಳು, ಅಡುಗೆ ಮನೆಗೆ ಬೇಕಾಗುವ ಅಗತ್ಯ ವಸ್ತುಗಳು ಹಾಗೂ ಸೋಲಾರ್ ದ್ವೀಪಗಳು ಸೇರಿ ಸುಮಾರು 35 ಟನ್ ತೂಕದ ವಸ್ತುಗಳನ್ನು ಮಾನವೀಯ ಪರಿಹಾರವಾಗಿ ಇಂದು ವಿಶೇಷ ವಿಮಾನದಲ್ಲಿ ವಿಯೆಟ್ನಾಂಗೆ ರವಾನಿಸಲಾಯಿತು.

4. ವಿಯೆಟ್ನಾಂಗೆ ಮಾನವೀಯ ನೆರವು ನೀಡಿರುವುದು ಉಭಯ ದೇಶಗಳ ನಡುವಿನ ನಿಕಟ ಸಂಬಂಧಕ್ಕೆ ಸಾಕ್ಷಿಯಾಗಿದೆ. ಸಮಗ್ರ ಕಾರ್ಯತಂತ್ರದ ಪಾಲುದಾರಿಕೆಗೂ ಇದು ಹೆಗ್ಗುರುತಾಗಿದೆ.

5. ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರು ಚಂಡಮಾರುತದಿಂದ ವಿಯೆಟ್ನಾಂಗೆ ಸಂಕಷ್ಟ ಎದುರಾಗುತ್ತಲೇ ವಿಯೆಟ್ನಾಂ ಪ್ರಧಾನಮಂತ್ರಿ ಘನತೆವೆತ್ತ ಶ್ರೀ ಫಾಮ್ ಮಿನ್ಹ್ ಚಿನ್ಹ್ ಅವರಿಗೆ ಅನುಕಂಪ ಹಾಗೂ ಒಗ್ಗಟ್ಟು ತೋರಿದರು. ವಿದೇಶಾಂಗ ವ್ಯವಹಾರಗಳ ಸಚಿವ ಶ್ರೀ ಡಾ.ಎಸ್.ಜೈಶಂಕರ್ ಅವರೂ ವಿಯೆಟ್ನಾಂ ಉಪ ಪ್ರಧಾನಿ ಹಾಗೂ ವಿದೇಶಾಂಗ ವ್ಯವಹಾರ ಸಚಿವರೂ ಆದ ಘನತೆವೆತ್ತ ಶ್ರೀ ಬುಯಿ ತಾನ್ಹ್ ಸನ್ ಅವರಿಗೆ ಸಹಾನುಭೂತಿ ವ್ಯಕ್ತಪಡಿಸಿದರು.

6. ಸಂತ್ರಸ್ತ ದೇಶಗಳಿಗೆ ಮಾನವೀಯ ನೆರವು ಹಾಗೂ ವಿಪತ್ತು ಪರಿಹಾರ (ಎಚ್ಎಡಿಆರ್) ಒದಗಿಸಲು ಮೊದಲು ಕಾರ್ಯಪ್ರವೃತ್ತಗೊಂಡ ದೇಶಗಳಲ್ಲಿ ಭಾರತವೂ ಒಂದಾಗಿದೆ. ' ಆಕ್ಟ್ ಈಸ್ಟ್ ಪಾಲಿಸಿ' ಅನ್ವಯ ಆಸಿಯಾನ ಪ್ರದೇಶದಲ್ಲಿ ಎಚ್ಎಡಿಆರ್ ಅಡಿಯಲ್ಲಿ ನೆರವು ನೀಡುವ ಭಾಗವಾಗಿ ಭಾರತವು ಆಪರೇಷನ್ ಸದ್ಭಾವ ಆರಂಭಿಸಿದೆ.

**ನವದೆಹಲಿ**

**ಸೆಪ್ಟೆಂಬರ್ 15, 2024**